

# ಸೂರ್ಯನಿಗೆ ಕಂಕಣ

ಕ್ರಿಸ್‌ಮಸ್ ಹಬ್ಬದ ಮಾರನೆಯ ದಿನ ಮಂಗಳೂರು ಮತ್ತು ಶ್ರೀಕೃಷ್ಣನ ಉಡುಪಿ ನಗರಗಳು ವಿಶೇಷ ಖಗೋಳ ಕೌತುಕಕ್ಕೆ ಸಾಕ್ಷಿಯಾಗಲಿವೆ. ಖಗೋಳಾಸಕ್ತರು, ವಿಜ್ಞಾನಿಗಳು, ವಿದ್ಯಾರ್ಥಿಗಳು ಮತ್ತು ಪುರೋಹಿತರಾದಿಯಾಗಿ ಎಲ್ಲರೂ ಆಕಾಶದಲ್ಲಿ ನಡೆಯುವ ನೆರಳು–ಬೆಳಕಿನ ಆಟವನ್ನು ನೋಡಲು ಉತ್ಸುಕತೆಯಿಂದ ತಮ್ಮ ಮಸೂರ, ದೂರದರ್ಶಕ, ಸೌರಕನ್ನಡಕ, ಪಂಚಾಂಗಗಳೊಂದಿಗೆ ಸಜ್ಜಾಗುತ್ತಿದ್ದಾರೆ. ಅಂದು ಬೆಳಗ್ಗೆ 8ರಿಂದ 11ರವರೆಗಿನ ಸಮಯದಲ್ಲಿ ಘಟಿಸುವ ಸೂರ್ಯನ ಕಂಕಣಗ್ರಹಣ ಸೌರಮಂಡಲ ಮತ್ತು ಸೂರ್ಯನ ಕುರಿತು ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಿದೆ. ಬೆಂಗಳೂರಿನ ಹಲವು ದೇವಸ್ಥಾನಗಳಲ್ಲಿ ಗ್ರಹಣ ದೋಷ ನಿವಾರಣೆಯ ಪೂಜೆಗೆ ತಯಾರಿ ನಡೆಯುತ್ತಿದೆ.

ಮಂಗಳೂರಿನಲ್ಲಿ ಪೂರ್ಣ ಪ್ರಮಾಣದ ಕಂಕಣ ಗ್ರಹಣ ಬರೋಬ್ಬರಿ ಎರಡು ನಿಮಿಷ ಕಾಣುವುದರಿಂದ ಕರಾವಳಿಯಲ್ಲಿ ಖಗೋಳಾಸಕ್ತರ ದಂಡೇ ನೆರೆಯಲಿದೆ. ವಿರಾಜಪೇಟೆ ತಾಲ್ಲೂಕಿನ ಹಳ್ಳಿ ಕುಟ್ಟಾದಲ್ಲಿ ಹೆಚ್ಚಿನ ಪ್ರಮಾಣದ ಕಂಕಣಗ್ರಹಣ ದರ್ಶನದ ಸಾಧ್ಯತೆ ಇರುವುದರಿಂದ, ಮೈಸೂರಿನ 'ಸೈನ್ಸ್ ಫೌಂಡೇಶನ್' 2000 ಜನರಿಗೆ ಗ್ರಹಣ ವೀಕ್ಷಣೆಗೆ ಸಕಲ ವ್ಯವಸ್ಥೆ ಮಾಡುತ್ತಿದೆ. ಗುಂಡ್ಲುಪೇಟೆ ತಾಲ್ಲೂಕಿನ 'ಮಂಗಳ ಗ್ರಾಮ, ನಂಜನಗೂಡು, ಕೇರಳದ ಕಾಸರಗೋಡು, ಕಣ್ಣೂರು, ವಯವಾಡಿನ ಕಲಪೆಟ್ಟಾ, ತಲಚೇರಿ, ತಮಿಳುನಾಡಿನ ಕೊಯಮತ್ತೂರು, ದಿಂಡಿಗಲ್ ಮತ್ತು ಪುದುಕೋಟ್ಟೈನಲ್ಲಿ ಶೇ. 96–99ರಷ್ಟು ಗ್ರಹಣವನ್ನು ನೋಡಬಹುದು. ಬೆಂಗಳೂರಿನ ಜನಗಿಗೆ ಪಾರ್ಶ್ವ ಕಂಕಣ ಗ್ರಹಣ (ಶೇ. 90) ವೀಕ್ಷಿಸಲು ಸಿಗಲಿದೆ.

ಭಾರತದಲ್ಲಷ್ಟೇ ಅಲ್ಲ, ಸೌದಿ ಅರೇಬಿಯಾ, ಒಮಾನ್, ಶ್ರೀಲಂಕಾದ ಜಾಫ್ನಾ ನಗರ, ಇಂಡೋನೇಷ್ಯಾ, ಸಿಂಗಪೂರ ಮತ್ತು ಮರೀನ ದ್ವೀಪದ ಮೂಲಕ ಹಾಯುವ 118 ಕಿ.ಮೀ. ಅಗಲದ ಗ್ರಹಣದ ನೆರಳು ಆಯಾ ಪ್ರದೇಶಗಳಲ್ಲಿ ಶೇ. 90–100ರಷ್ಟು ಕಂಕಣ ಗ್ರಹಣವನ್ನು ಜನರಿಗೆ ಕಾಣಿಸಲಿದೆ. ಹತ್ತು ವರ್ಷಗಳ ಹಿಂದೆ ಜನವರಿ 15, 2010ರಲ್ಲಿ ಜರುಗಿದ ಕಂಕಣ ಸೂರ್ಯಗ್ರಹಣದ ಅವಧಿ 11 ನಿಮಿಷ 8 ಸೆಕೆಂಡುಗಳಷ್ಟು ದೀರ್ಘವಾಗಿದ್ದು, 300 ಕಿ.ಮೀ. ಅಗಲದ ನೆರಳು ದಕ್ಷಿಣ ಭಾರತದ ರಾಮೇಶ್ವರಂ ಮತ್ತು ಕನ್ಯಾಕುಮಾರಿಯ ಮೂಲಕ ಹಾದುಹೋಗಿತ್ತು.

## ಏನಿದು ಕಂಕಣ ಗ್ರಹಣ?

ಸೂರ್ಯ–ಚಂದ್ರ ಮತ್ತು ಭೂಮಿ ಒಂದೇ ಸರಳ ರೇಖೆಯಲ್ಲಿ ಬಂದಾಗ ಸೂರ್ಯಗ್ರಹಣ ಸಂಭವಿಸುತ್ತದೆ. ಪ್ರತೀ 29 ದಿನಗಳಿಗೊಮ್ಮೆ ಚಂದ್ರ, ಸೂರ್ಯ ಮತ್ತು ಭೂಮಿಯ ನಡುವೆ ಬರುತ್ತದೆ. ಆಗ ಭೂಮಿಯ ಮೇಲೆ ಅಮಾವಾಸ್ಯೆಯಾಗಿರುತ್ತದೆ. ಭೂಮಿಯಿಂದ ಗಮನಿಸಿದಾಗ ಸೂರ್ಯನ ಎಷ್ಟು ಭಾಗವನ್ನು ಚಂದ್ರ ಮರೆ ಮಾಡುತ್ತದೆ ಎಂಬುದನ್ನಾಧರಿಸಿ ಗ್ರಹಣ ಖಗ್ರಾಸವೋ, ಪಾರ್ಶ್ವವೋ ಅಥವಾ ಕಂಕಣವೋ ಎಂದು ಹೇಳುತ್ತೇವೆ. ಪ್ರಸಕ್ತ ಗ್ರಹಣದ ಸಮಯದಲ್ಲಿ ಭೂಮಿಯಿಂದ ಚಂದ್ರ ದೂರದಲ್ಲಿದ್ದು, ಗಾತ್ರವು ಸೂರ್ಯನಿಗಿಂತ ಚಿಕ್ಕದಾಗಿ ಗೋಚರಿಸುವುದರಿಂದ ಸೂರ್ಯನ ಶೇ. 93ರಷ್ಟು ಭಾಗವನ್ನು ಮಾತ್ರ ಮರೆಮಾಡಿ